**ಅ.ದಾ. ಸಂ. 34/2020 PW-1**

**ದಿನಾಂಕಃ 21.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ.ಕೆ.ಟಿ.ಟಿ. ವಕೀಲರಿಂದಃ-

1) ಸೋಮನಾಥಪುರ ರಸ್ತೆ ಯಾವುದು ಎಂದೇ ನನಗೆ ಗೊತ್ತಿಲ್ಲ. ಸರ್ವೆ ನಂ.199/4, 198/2 ಎ, 178/2 ಎ ಗಳ ದಕ್ಷಿಣಕ್ಕೆ ಎಸ್.ಲಿಂಗೇಗೌಡರವರ ಜಮೀನು ಇದೆ. ನಿಡಿ.1 ರಲ್ಲಿ ಕಾಣುವ ಹಸಿರು ಬಣ್ಣ ಕಾಣುವುದರ ಪಕ್ಕದ ಎಸ್.ಲಿಂಗೇಗೌಡರವರ ಜಮೀನು ಎಂದರೆ ಸರಿ. ಸದರಿ ಜಮೀನಿನ ಪಕ್ಕದಲ್ಲಿ ಒಂದು ರಸ್ತೆ ಇದೆ ಎಂದರೆ ಸರಿ. ನಿಡಿ.1 ರಲ್ಲಿ ಕಾಣುವುದು ಪಂಪ್ ಹೌಸ್ ಎಂದರೆ ಸರಿ. ಸದರಿ ಪಂಪ್ ಹೌಸ್ ನನಗೆ ಸೇರಿದ್ದು. ನಿಡಿ.1ರಲ್ಲಿ ಕಾಣುವ ಬಿಳಿ ಬಣ್ಣದಲ್ಲಿ ಕಾಣುವುದು ಸೋಮನಾಥಪುರ ರಸ್ತೆ. ಪ್ರಸ್ತುತ ದಾವೆಯನ್ನು ನಾನೇ ಹೇಳಿ ಸಲ್ಲಿಸಿರುತ್ತೇನೆ. ಯಾವ ಸರ್ವೆ ನಂಬರ್ ನಲ್ಲಿ ರಸ್ತೆ ಕೇಳಿ ಪ್ರಸ್ತುತ ದಾವೆ ಸಲ್ಲಿಸಿದ್ದೇನೆ ಎಂದು ನನಗೆ ಈಗ ನೆನಪಿಲ್ಲ, ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ಸಲ್ಲಿಸಿರುವ ದಾವೆಯಲ್ಲಿ ನಿರ್ದಿಷ್ಟ ಸರ್ವೇನಂಬರ್ ನಲ್ಲಿ ನನಗೆ ರಸ್ತೆ ಬೇಕು ಎಂದು ಕೇಳಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ರವರ ಜಮೀನಿನ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ದಾವೆಯಲ್ಲಿ ಪ್ರತಿವಾದಿಯ ಜಮೀನಿನ ನಂಬರ್ ನಮೂದು ಮಾಡಲಾಗಿದೆ.

2) ಪ್ರಸ್ತುತ ದಾವೆ ಸಲ್ಲಿಸುವ ಸಂದರ್ಭದಲ್ಲಿ ವಾದ ಪತ್ರದಲ್ಲಿರುವ ಅಂಶಗಳನ್ನು ಓದಿ ತಿಳಿದುಕೊಂಡಿದ್ದೇನೆ. ಸರ್ವೆ ನಂ.199/1 ರಲ್ಲಿ ರಸ್ತೆ ಬೇಕು ಎಂದು ವಾದ ಪತ್ರದಲ್ಲಿ ನಮೂದು ಮಾಡಿದ್ದೇನೆ. ಸದರಿ ಸರ್ವೇ ನಂಬರ್ ನಲ್ಲಿ ರಸ್ತೆಗಾಗಿ ಜಮೀನನ್ನು ಕಡಿತ ಮಾಡಲಾಗಿದೆಯೇ ಎಂದರೆ ಗೊತ್ತಿಲ್ಲ. ಸೋಮನಾಥಪುರ ರಸ್ತೆ ಮೂಲಕ ನಮ್ಮ ಜಮೀನುಗಳಿಗೆ ಹೋಗಲು ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿ ತೊಂದರೆ ಇದೆ ಎಂದು ನುಡಿಯುತ್ತಾರೆ. ನನ್ನ ಜಮೀನುಗಳು ಸೋಮನಾಥಪುರ ರಸ್ತೆಗೆ ಹೊಂದಿಕೊಂಡಂತೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 20 ಅಡಿ ಎತ್ತರವಿರುವ ಏರಿ ಇದೆ ಎಂದು ನುಡಿಯುತ್ತಾರೆ. ಈ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ಪೂರ್ವದ ಏರಿಯಿಂದಲೇ ನಮ್ಮ ಜಮೀನಿಗೆ ಹೋಗಬೇಕು ಎಂದು ತೋರಿಸಲು ನಾನು

ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ಸದರಿ ದಾರಿ ಹೊರತುಪಡಿಸಿ ನನಗ ಬೇರೆ ದಾರಿ ಇಲ್ಲ ಎಂದು ತೋರಿಸಲುಸ ಸಹ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ನಮ್ಮ ಜಮೀನಿಗೆ ದಕ್ಷಿಣ ದಿಕ್ಕಿನಿಂದ ಹೋಗಲು ದಾರಿ ಇದ್ದರೂ ಸಹ ದಾರಿ ಇಲ್ಲ ಎಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ ಸ್ವತ್ತಿನ ಸರ್ವೇ ನಂಬರ್ ನಮೂದಿಸಿದೆ ದಾವೆ ಸಲ್ಲಿಸಿ ಅವರಿಗೆ ತೊಂದರೆ ನೀಡುತ್ತಿದ್ದೇನ ಎಂದರೆ ಸರಿಯಲ್ಲ. ನಮ್ಮ ಜಮೀನುಗಳಿಗೆ ಓಡಾಡಲು ಯಾವುದೇ ರಸ್ತೆಯ ಅವಶ್ಯಕತೆ ಇಲ್ಲದೇ ಇದ್ದರೂ ಸಹ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ